ಅ) ಈ ಸಂಕೀರ್ಣದಲ್ಲಿರುವ ಮಳಿಗೆಗಳನ್ನು ನಾಗರೀಕರ ಉಪಯೋಗಕ್ಕಾಗಿ ನೀಡುವ ಕುರಿತು ಇದುವರೆಗೆ ಕೈಗೊಂಡ ಪ್ರಯತ್ನಗಳೇನು;

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :

ಅ) 10 ವರ್ಷಗಳಾದವು

ಆ) ಹಂಚಿಕೆ ಮಾಡಲು ಆಸಕ್ತಿವುಳ್ಳ ಸಾರ್ವಜನಿಕರಿಂದ ಅರ್ಜಿ ಕೋರಿ ದಿನಾಂಕ 14-07-1987 ರಂದು ಪ್ರಕಟಣೆ ಹೊರಡಿಸಲಾಗಿತ್ತಾದರೂ, ಸಾಕಷ್ಟು ಅರ್ಜಿಗಳು ಸ್ವೀಕೃತವಾಗಿಲಿಲ್ಲ. ನಂತರ ದಿನಾಂಕ 17-08-1991ರಲ್ಲಿ ಸಂಕೀರ್ಣದಲ್ಲಿನ ಒಟ್ಟು 23 ಮಳಿಗೆಗಳನ್ನು ಹರಾಜು ಮೂಲಕ ವಿಲೇವಾರಿ ಮಾಡಲು ಹರಾಜು ಪ್ರಕಟಣೆ ಹೊರಡಿಸಲಾಯಿತು. ಅದರಂತೆ ದಿನಾಂಕ 05-09-1991ರಂದು ನಡೆದ ಹರಾಜಿನಲ್ಲಿ ಅಧಿಕ ಸಂಖ್ಯೆಯಲ್ಲಿ ಬಡ್ಡುದಾರರು ಬಾಗವಹಿಸದ ಕಾರಣ ಹರಾಜನ್ನು ರದ್ದುಗೊಳಿಸಲಾಯತು.

ಇ) ಈ ಪ್ರದೇಶವನ್ನು ಬಹಿರಂಗ ಹರಾಜಿನಲ್ಲಿ ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಮೈಸೂರು ನಗರದ ಅಶೋಕ ವೃತದ ಬಳಿ ಮಯೂರ ಕಾಂಪ್ಲೆಕ್ಸ್ ನಿರ್ಮಾಣ

838 (1042) ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದ ಅಶೋಕ ವೃತ್ತದ ಬಳಿ ಮಯೂರ ಕಾಂಪ್ಲೆಕ್ಸ್ ನಿರ್ಮಾಣ ಮಾಡುವ ಕಾಮಗಾರಿ ಕೆಲಸ ಅರ್ಧಕ್ಕೆ ನಿಲ್ಲಲು ಕಾರಣಗಳೇನು?

ಆ) ಅಪೂರ್ಣಗೊಂಡಿರುವ ಕೆಲಸಕ್ಕೆ ಎಷ್ಟು ಖರ್ಚಾಗಿದೆ?

ಇ) ಕಾಂಪ್ಲೆಕ್ಸ್ ನಿರ್ಮಾಣ ಅಪೂರ್ಣಗೊಳ್ಳಲು ಕಾರಣಕರ್ತರು ಯಾರು ಯಾರು?

ಈ) ಕಾಂಪ್ಲೆಕ್ಸ್ ನಿರ್ಮಾಣ ಅಪೂರ್ಣಗೊಳ್ಳಲು ಕಾರಣಕರ್ತರು ಯಾರು ಯಾರು?

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :

ಅ) ಮಂದಗತಿ ಪ್ರಗತಿ

ಆ) 40 ಲಕ್ಷಗಳು

ಇ) ಮೆ: ಕೋಡೆ ಇಂಜನಿಯರಿಂಗ್, ಬೆಂಗಳೂರು

ಈ) ಇದು ಪರಿಶೀಲನೆಯಲ್ಲಿದೆ